# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸಿಎ-3/ಎ3/SC/ಶಾ.ಸಂ./2024-25

ಜ್ಞಾನಭಾರತಿ
ಬೆಂಗಳೂರು-560 056
**ದಿನಾಂಕ:22.10.2024**

## ಅಧಿಸೂಚನೆ

ವಿಷಯ : ಸುರಾನ ಕಾಲೇಜಿಗೆ **2024-25**ನೇ ಶೈಕ್ಷಣಿಕ ಸಾಲಿನಿಂದ ಶಾಶ್ವತ ಸಂಯೋಜನೆ ನೀಡುವ ಬಗೆಗೆ.

ಉಲ್ಲೇಖ : 1) ಸರ್ಕಾರದ ಪತ್ರ ಸಂಖ್ಯೆ: ಇಡಿ/312/ಯುಬಿವಿ/2024, ದಿನಾಂಕ 03.10.2024 ಮತ್ತು 04.10.2024.

2) ಕುಲಪತಿಯವರ ಅನುಮೋದನೆ ದಿನಾಂಕ:16.10.2024.

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 62ನೇ ಪ್ರಕರಣ (1)ನೇ ಉಪಪ್ರಕರಣದಡಿ ಪ್ರದತ್ತವಾದ ಅಧಿಕಾರದನ್ವಯ ಹಾಗೂ ವಿಶ್ವವಿದ್ಯಾಲಯ ಪರಿನಿಯಮದನ್ವಯ, ಬೆಂಗಳೂರು ವಿಶ್ವವಿದ್ಯಾಲಯವು ಬೆಂಗಳೂರಿನ **ಸುರಾನ ಕಾಲೇಜು** ನಡೆಸುತ್ತಿರುವ ಈ ಕೆಳಗೆ ನಮೂದಿಸಿರುವ ಕೋರ್ಸಿಗೆ/ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಐದು ವರ್ಷಗಳ ಅವಧಿಯ ಶಾಶ್ವತ ಸಂಯೋಜನಾ ಮಂಜೂರಾತಿಯನ್ನು 2024-25ನೇ ಶೈಕ್ಷಣಿಕ ಸಾಲಿನಿಂದ 2028-29ನೇ ಸಾಲಿಗೆ ಜಾರಿಗೆ ಬರುವಂತೆ ನೀಡಿದೆ.

| ಕೋರ್ಸು (Programme) | ವಿಷಯವಾರು (Subject / Combination) | ವಿದ್ಯಾರ್ಥಿ ಪ್ರಮಾಣ |
|---|---|---|
| ಬಿ.ಎ. | ಅರ್ಥಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ | 60 (ಅರವತ್ತು) |
| | ಅರ್ಥಶಾಸ್ತ್ರ, ಇತಿಹಾಸ, ಪತ್ರಿಕೋದ್ಯಮ | 60 (ಅರವತ್ತು) |
| ಬಿ.ಬಿ.ಎ. | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 60 (ಅರವತ್ತು) |
| ಬಿ.ಕಾಂ. | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 80 (ಎಂಭತ್ತು) |
| ಬಿ.ಸಿ.ಎ | ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ | 60+60=120 ( ನೂರ ಇಪ್ಪತ್ತು) |
| ಬಿ.ಎಸ್ಸಿ | ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಪರಿಸರ ವಿಜ್ಞಾನ | 40 (ನಲವತ್ತು) |
| | ರಸಾಯನಶಾಸ್ತ್ರ,ಗಣಿತಶಾಸ್ತ್ರ, ಭೌತಶಾಸ್ತ್ರ | 40 (ನಲವತ್ತು) |

**ಷರತ್ತುಗಳು:**

1. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕೋರ್ಸುಗಳಿಗೆ ಸರ್ಕಾರವು ಯಾವುದೇ ಕಾಲಕ್ಕೆ ಅನುದಾನವನ್ನು ಮಂಜೂರುಮಾಡುವುದಿಲ್ಲ. ಅವು ಶಾಶ್ವತ ಅನುದಾನ ರಹಿತ ಕೋರ್ಸುಗಳೆಂದು ಪರಿಗಣಿಸತಕ್ಕದ್ದು.
2. ಸ್ಥಳೀಯ ಪರಿಶೀಲನಾ ಸಮಿತಿಯು ವಿಧಿಸಿರುವ ಪ್ರತಿಯೊಂದು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ವಿಶ್ವವಿದ್ಯಾಲಯದ ಅನುಶಾಸನ ಪರಿನಿಯಮಾವಳಿ ಮತ್ತು ಅಧ್ಯಾದೇಶಗಳನ್ನು ಕಾಲೇಜು ತಪ್ಪದೇ ಪಾಲಿಸತಕ್ಕದ್ದು.
4. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ/ ಜಾರಿಯಲ್ಲಿರುವ ನಿಯಮಾವಳಿ ಮತ್ತು ಆದೇಶಗಳನ್ನು ಪಾಲಿಸತಕ್ಕದ್ದು.
5. 2024-25ನೇ ಸಾಲಿನಿಂದ ನೀಡಿರುವ ಶಾಶ್ವತ ಸಂಯೋಜನೆಯು ತಪಾಸಣೆಗೆ ಹಾಗೂ ನಿಯತಕಾಲಿಕ ಪರಿಶೀಲನೆಗೆ ಒಳಪಟ್ಟಿರುತ್ತದೆ.
6. ಶಾಶ್ವತ ಸಂಯೋಜನೆಯು ಮಂಜೂರಾತಿಗೆ ಒಳಪಟ್ಟ ಕೋರ್ಸುಗಳಿಗೆ:ವಿಷಯ ಸಮೂಹಗಳಿಗೆ: ಭಾಷೆಗಳಿಗೆ ಮಾತ್ರ ಅನ್ವಯವಾಗುತ್ತದೆ.
7. ಶಾಶ್ವತ ಸಂಯೋಜನೆಗೆ ಒಳಪಡದ ಕೋರ್ಸುಗಳಿಗೆ : ವಿಷಯ ಸಮೂಹಗಳಿಗೆ: ಭಾಷೆಗಳಿಗೆ ಕಾಲೇಜು ಸಂಯೋಜನಾ ನವೀಕರಣಕ್ಕೆ ವಿಶ್ವವಿದ್ಯಾಲಯದಿಂದ ಮಂಜೂರಾತಿ ಪಡೆಯತಕ್ಕದ್ದು.
8. ಶಾಶ್ವತ ಸಂಯೋಜನೆಯ ಅವಧಿ ಮುಗಿದ ಮೇಲೆ, ಮತ್ತೆ ಈ ಶಾಶ್ವತ ಸಂಯೋಜನಾ ನವೀಕರಣದ ಪರಿಶೀಲನೆಗೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸತಕ್ಕದ್ದು.
9. ವಿಶ್ವವಿದ್ಯಾಲಯದಿಂದ ಈ ಮೊದಲು ಸದರಿ ಕೋರ್ಸುಗಳಿಗೆ ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣವು ಯಾವುದೇ ಕಾಲಕ್ಕೂ ಹೆಚ್ಚುವರಿ ಆಗತಕ್ಕದ್ದಲ್ಲ.
10. ಕಾಲೇಜು/ಆಡಳಿತ ಮಂಡಳಿ ಶೇ.50ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗಧಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು

ನಿಗಧಿಪಡಿಸುವ ಶುಲ್ಕವನ್ನು ಮಾತ್ರ ವಸೂಲುಮಾಡತಕ್ಕದ್ದು. ವಿಶ್ವವಿದ್ಯಾಲಯವು ನಿಗಧಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಜೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.

11. ವಿಶ್ವವಿದ್ಯಾಲಯವು, ಕಾಲೇಜಿನ ವಿದ್ಯಾರ್ಥಿಗಳು, ಭೋಧಕರು ಹಾಗೂ ಭೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು. ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರಿ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಂಡಲ್ಲಿ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

12. ವೈಶಾಕ ತ/ ರಾಜಸ್ಥಾನದ ರಾಜ್ಯ ಸರ್ಕಾರದ ಮೊಕದ್ದಮೆಗೆ ಸಂಬಂಧಿಸಿದಂತೆ, ದಿನಾಂಕ:13-8-1997ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿ/ವಿದ್ಯಾರ್ಥಿ, ಗಲಭೆಯನ್ನು ಉಂಟುಮಾಡುವುದಾಗಲೀ ಅಥವಾ ಯಾವುದೇ ವ್ಯಕ್ತಿಯಿಂದ(ಬೋಧಕ/ ಬೋಧಕೇತರ/ ಆಡಳಿತಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ/ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕುಳ, ಲೈಂಗಿಕ ಕಿರುಕಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ/ವಿದ್ಯಾರ್ಥಿ ಈ ರೀತಿಯಾದ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ/ ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾದಗಳನ್ನು/ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಚ ನ್ಯಾಯಲಯದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು.

13. ಕಾಲೇಜು, ಕೋರ್ಸುಗಳ ಶಿಕ್ಷಣ ಕ್ರಮವನ್ನು, ವಿದ್ಯಾರ್ಥಿಗಳ ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಉತ್ತಮಪಡಿಸತಕ್ಕದ್ದು. ವಿದ್ಯಾರ್ಥಿಗಳನ್ನು, ಸೇವೆಯಲ್ಲಿರುವ ಭೋಧಕರುಗಳನ್ನು ಪ್ರಾಂಶುಪಾಲರು/ಆಡಳಿತ ಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದ್ದು.

14. ಕಾಲೇಜು ವಿನಾಕಾರಣ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು ಆರು ತಿಂಗಳ ಅವಧಿ ಮೀರದಂತೆ ತಮ್ಮಲ್ಲಿಯೇ ಇಟ್ಟುಕೊಳ್ಳತಕ್ಕದ್ದಲ್ಲ, ಪ್ರವೇಶ ಅನುಮೋದನೆಗಾಗಿ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು, ಪ್ರವೇಶ ಅನುಮೋದನೆಯಾದ ನಂತರ ವಿದ್ಯಾರ್ಥಿಗಳಿಗೆ ತ್ವರಿತವಾಗಿ ಅವರಿಗೆ ವಿತರಣೆಯನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ತಿಳಿಸತಕ್ಕದ್ದು.

15. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದಲ್ಲಿ, ಕಾಲೇಜು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ/ಸೆಮಿಸ್ಟರ್‌ನ ಪೂರ್ಣವಾಗದ ಅವಧಿಯ ಭೋದನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.

16. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.

17. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

18. ಕಾಲ ಕಾಲಕ್ಕೆ ವಿಶ್ವವಿದ್ಯಾಲಯವು ನಿಗಧಿಪಡಿಸಿದ ವಾರ್ಷಿಕ ಶುಲ್ಕಗಳನ್ನು ತಪ್ಪದೇ ಪಾವತಿಸತಕ್ಕದ್ದು.

19. **ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.**

ಆದೇಶದ ಮೇರೆಗೆ

22/10/24

ಕುಲಸಚಿವರು

ಗೆ,

**ಪ್ರಾಂಶುಪಾಲರು,**
**ಸುರಾನಾ ಕಾಲೇಜು,**
**ನಂ.167, ಇಂಡಸ್ಟ್ರಿಯಲ್ ಸಬರ್ಬ್ಸ್,**
**5ನೇ ಮುಖ್ಯರಸ್ತೆ, 2ನೇ ಹಂತ, ಪೀಣ್ಯ**
**ಬೆಂಗಳೂರು – 560 022.**

ಪ್ರತಿಗಳು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560001.
2. ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-560056.
3. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056.
4. ಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು ಶೈಕ್ಷಣಿಕ ವಿಭಾಗ-1/4. ಬೆಂ.ವಿ.ವಿ. ಬೆಂಗಳೂರು-560056.
5. ಅಧೀಕ್ಷಕರು, ಕಾನ್ಫಿಡೆನ್ಷಿಯಲ್ ವಿಭಾಗ, ಪರೀಕ್ಷಾ ವಿಭಾಗ, ಬೆಂ.ವಿ.ವಿ., ಬೆಂಗಳೂರು-560056.
6. ಐ.ಟಿ. ಕೋಆರ್ಡಿನೇಟರ್, ಯು.ಯು.ಸಿ.ಎಂ.ಎಸ್., ಬೆಂ.ವಿ.ವಿ, ಬೆಂಗಳೂರು-560056.
7. ಸಹಾಯಕ ನಿರ್ದೇಶಕರು, ಅಂಕಿ ಅಂಶಗಳ ವಿಭಾಗ, ಬೆಂ.ವಿ.ವಿ., ಬೆಂಗಳೂರು-560056.